

ಬುಗುಡಿಯ ಹಿಂದೆ ಅಡಗಿದೆ ವೈಜ್ಞಾನಿಕ ಸತ್ಯ: ಬುಗುಡಿ ಕೇವಲ ಸೌಂದರ್ಯಕ್ಕಷ್ಟೇ ಸೀಮಿತವಾಗಿಲ್ಲ. ಕಿವಿಯ ಮೇಲ್ಭಾಗದ ನರಗಳ ಮೇಲೆ ಸಣ್ಣ ಮಟ್ಟದ ಒತ್ತಡ ಹೇರುವ ಮೂಲಕ ದೇಹದ ಸಮತೋಲನ ಕಾಪಾಡಿಕೊಳ್ಳಲು ಹಾಗೂ ರಕ್ತಸಂಚಾರವನ್ನು ಸುಸ್ಥಿತಿಯಲ್ಲಿಡಲು ಇದು ಸಹಕಾರಿ ಎಂಬ ವೈಜ್ಞಾನಿಕ ನಂಬಿಕೆಯೂ ಇದೆ. ಆಕ್ಯುಪಂಕ್ಚರ್ ತತ್ವದಂತೆ ಇದು ದೇಹದ ಚೈತನ್ಯವನ್ನು ವೃದ್ಧಿಸುತ್ತದೆ ಎಂದು ಹಿರಿಯರು ಹೇಳುತ್ತಾರೆ. ನಮ್ಮ ಪೂರ್ವಜರು ರೂಪಿಸಿದ ಪ್ರತಿ ಆಭರಣಗಳ ಹಿಂದೆ ಇಂತಹದೊಂದು ಆರೋಗ್ಯದ ಗುಟ್ಟು ಅಡಗಿರುವುದು ನಿಜಕ್ಕೂ ಆಶ್ಚರ್ಯಕರ.

## ವಿನ್ಯಾಸದ ವೈವಿಧ್ಯ: ಕಲೆಯ ಸಂಗಮ

ಬುಗುಡಿಯ ರಚನೆಯೇ ಒಂದು ಅದ್ಭುತ. ಸಾಮಾನ್ಯವಾಗಿ ಇದು ಒಂದು ಸಣ್ಣ ಕೊಳವೆಯಂತಹ ರಚನೆಯನ್ನು ಹೊಂದಿರುತ್ತದೆ. ಅದನ್ನು ಕಿವಿಯ ಮೇಲ್ಭಾಗದ ರಂಧ್ರಕ್ಕೆ ಪೋಣಿಸಲಾಗುತ್ತದೆ. ಇಂದಿನ ಮಾರುಕಟ್ಟೆಯಲ್ಲಿ ಬುಗುಡಿ ಅನೇಕ ಹೊಸ ಅವತಾರಗಳನ್ನು ತಳೆದಿದೆ.



- ಮುತ್ತಿನ ಬುಗುಡಿ: ಬಂಗಾರದ ಅಂಚಿನ ಮೇಲೆ ಹಾಲು ಬಿಳಿ ಮುತ್ತಿನ ಸಾಲುಗಳಿಂದ ಕಂಗೊಳಿಸುವ ಇವು ಸೌಮ್ಯ ಹಾಗೂ ಘನತೆಯ ನೋಟವನ್ನು ನೀಡುತ್ತವೆ.
- ಟೆಂಪಲ್ ಜ್ಯುವೆಲ್ಲರಿ ಶೈಲಿ: ಕೆಂಪು ಮತ್ತು ಪಚ್ಚೆ ಕಲ್ಲುಗಳಿಂದ ಕೂಡಿದ ಬುಗುಡಿಗಳು ದಕ್ಷಿಣ ಭಾರತದ ದೇವಸ್ಥಾನಗಳ ಕೆತ್ತನೆಯ ಶೈಲಿಯನ್ನು ಹೋಲುತ್ತವೆ. ರೇಷ್ಮೆ ಸೀರೆಗಳಿಗೆ ಇವು ಹೇಳಿ ಮಾಡಿಸಿದಂತಿರುತ್ತವೆ.
- ಚಿನ್ನದ ನಕ್ಷೆಯ ಬುಗುಡಿ: ಇದರಲ್ಲಿ ಹರಳುಗಳಿರುವುದಿಲ್ಲ. ಕೇವಲ ಬಂಗಾರದಲ್ಲಿಯೇ ಹೂವು, ಬಳ್ಳಿ ಅಥವಾ ಗಂಟೆಯ ಆಕಾರದ ಸೂಕ್ಷ್ಮ ಕೆತ್ತನೆ ಇರುತ್ತದೆ. ಇದು ಕಿವಿಯ ಮೇಲೆ ಅರಮನೆಯಂತೆ ಕುಳಿತು, ನಡಿಗೆಯ ತಾಳಕ್ಕೆ ತಕ್ಕಂತೆ ನಲಿದಾಡುತ್ತಾ ನೋಡುಗರ ಗಮನಸೆಳೆಯುತ್ತದೆ.
- ಆಕ್ಸಿಡೈಸ್ಡ್ ಸಿಲ್ವರ್ ಬುಗುಡಿ: ಇಂದಿನ ಕಾಲೇಜು ಯುವತಿಯರ ಹಾಟ್ ಫೇವರೆಟ್ ಎಂದರೆ ಕಪ್ಪು ಬಣ್ಣದ ಛಾಯೆ ಇರುವ ಬೆಳ್ಳಿಯ ಬುಗುಡಿಗಳು.
- 'ನೆಗಡಿಯಂತಹ ರೋಗ ಇಲ್ಲ.. ಬುಗುಡಿಯಂತಹ ಆಭರಣ ಇಲ್ಲ' ಎಂಬ ಮಾತಿನಂತೆ ಮೋತಿ ಬುಗುಡಿ, ಖಡ್ಡಿ ಬುಗುಡಿ, ಲವಂಗ ಬುಗುಡಿ, ಕಳಶಿನ್ ಬುಗುಡಿ, ಡಿಸ್ಕ್ ಬುಗುಡಿ, ಜುಮುಕಾ ಬುಗುಡಿ... ಹೀಗೆ ಹೆಸರಿಗೆ ತಕ್ಕಂತೆ ವೈವಿಧ್ಯಮಯ ಬುಗುಡಿಗಳು ಇಂದು ಮಾರುಕಟ್ಟೆಯಲ್ಲಿ ಬಹು ಬೇಡಿಕೆಯ ಆಭರಣವಾಗಿಬಿಟ್ಟಿದೆ.

ಸಿನಿಮಾ ತಾರೆಯರು ಮತ್ತು ಸೋಷಿಯಲ್ ಮೀಡಿಯಾ ಇನ್ಫ್ಲುಯೆನ್ಸರ್‌ಗಳು ಬುಗುಡಿಯನ್ನು ಧರಿಸತೊಡಗಿದ ಮೇಲಂತೂ ಯುವತಿಯರಲ್ಲಿ ಇದರ ಕ್ರೇಜ್ ಮತ್ತಷ್ಟು ಹೆಚ್ಚಾಗಿದೆ.

ಅದರಲ್ಲೂ ರವಿವರ್ಮನ ಕುಂಚದಲ್ಲಿ ಅರಳಿದ ನಾರಿಯ ಕಿವಿಯಲ್ಲಿ ಮೋಡಿ ಮಾಡಿದ್ದ ಬುಗುಡಿಯನ್ನು ಕಂಡ ಮೇಲಂತೂ ನಾರಿಯರು ಮತ್ತೆ ಹಿಂದಿನ ಸೌಂದರ್ಯ ಶೈಲಿಯನ್ನೇ ಮರು ಸೃಷ್ಟಿಸುತ್ತಿದ್ದಾರೆ. ಸಾಂಪ್ರದಾಯಿಕ ಶೈಲಿ ಇಷ್ಟಪಡುವವರಿಗಂತೂ ಅಮ್ಮನ ಕಿವಿಯ ಮೇಲೆ ಕಿರೀಟದಂತೆ ಹೊಳೆಯುತ್ತಿದ್ದ ಈ ಬುಗುಡಿಗಳ ಮೇಲೆ ಇನ್ನಿಲ್ಲದ ಅಕ್ಕರೆ. ಕಿವಿಯ ಮೇಲ್ಭಾಗದಲ್ಲಿ ರಂಧ್ರ ಮಾಡಿಸಿಕೊಳ್ಳಲು ಹಿಂಜರಿಯುವವರಿಗಾಗಿ ಈಗ 'ಪ್ರೆಸ್ಸಿಂಗ್' (ಕ್ಲಿಪ್–ಆನ್) ಮಾದರಿಯ ವಿವಿಧ ಬಗೆಯ ಬುಗುಡಿಗಳೂ ಕಣ್ಮನ ಸೆಳೆಯುತ್ತಿವೆ.

## ಇಂದಿನ ಫ್ಯಾಷನ್ ಲೋಕದಲ್ಲಿ ಬುಗುಡಿ

ಸದಾ ಹೊಸತನದ ಹಿಂದೆ ಓಡುವ ಮಹಿಳೆಯರು, ಯುವತಿಯರು ಈಗ ಇಂಡೊ–ವೆಸ್ಟರ್ನ್ ಲುಕ್‌ಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಒಂದೇ ಸ್ಟೈಲ್ ಮಾಡಿ ಬೋರಾಗಿರುವ ಮಂದಿಯಂತೂ ದಿನಕ್ಕೊಂದು ಫ್ಯಾಷನ್ ಮಾಡುತ್ತಾ ಎಲ್ಲರ ಚಿತ್ತವನ್ನ ತಮ್ಮತ್ತ ಸೆಳೆದುಕೊಳ್ಳುತ್ತಾರೆ. ಅದರಲ್ಲೂ ಅಂದದ ಬುಗುಡಿಗಳನ್ನು ಕರ್ಣಗಳಿಗೇರಿಸಿ ಕಂಗೊಳಿಸುತ್ತಾರೆ.

- ಕ್ಯಾಶುವಲ್ ಲುಕ್: ಜೀನ್ಸ್ ಮತ್ತು ಕುರ್ತಾಗಳಿಗೆ ಸಣ್ಣದಾದ ಬೆಳ್ಳಿಯ ಬುಗುಡಿ ಧರಿಸುವುದು ಈಗಿನ ಟ್ರೆಂಡ್.
- ವೆಡ್ಡಿಂಗ್ ಲುಕ್: ಭಾರವಾದ ಕಂಚಿ ಸೀರೆ ಉಟ್ಟು, ಮುಡಿ ತುಂಬ ಮಲ್ಲಿಗೆ ಏರಿಸಿಕೊಂಡು ಅದರ ಜೊತೆಗೆ ಸಾಂಪ್ರದಾಯಿಕ ಹವಳ ಅಥವಾ ಮುತ್ತಿನ ಬುಗುಡಿ ಧರಿಸಿದರೆ ಆ ಹೆಣ್ಣಿನ ಅಂದಕ್ಕೆ ಸಾಟಿಯೇ ಇಲ್ಲ.
- ಪ್ರಯೋಗಶೀಲತೆ: ಕೆಲವರಂತೂ ಕೇವಲ ಒಂದು ಕಿವಿಗೆ ಮಾತ್ರ ಬುಗುಡಿ ಧರಿಸಿ ವಿಭಿನ್ನವಾಗಿ ಕಾಣಲು ಪ್ರಯತ್ನಿಸುತ್ತಾರೆ.

ಪರಂಪರೆ ಎಂದಿಗೂ ಮರೆಯಾಗಬಾರದು, ಅದು ಕಾಲಕ್ಕೆ ತಕ್ಕಂತೆ ಬದಲಾಗುತ್ತಿರಬೇಕು. ಬುಗುಡಿ ಅಂತಹ ಒಂದು ಬದಲಾವಣೆಯನ್ನು ಯಶಸ್ವಿಯಾಗಿ ಕಂಡಿದೆ. ಹಳೆಯ ಕಾಲದ ಸಂಪ್ರದಾಯದೊಂದಿಗೆ ಆಧುನಿಕತೆಯ ಮೆರುಗನ್ನು ಬೆರೆಸಿ ನೀವು ಕೂಡ ಒಮ್ಮೆ ಬುಗುಡಿಯನ್ನು ಧರಿಸಿ ನೋಡಿ. ನಿಮ್ಮ ಸೌಂದರ್ಯಕ್ಕೆ ಈ ಸಾರ್ವಕಾಲಿಕ ಸುಂದರಿ ಹೊಸ ಮೆರುಗು ನೀಡುವುದರಲ್ಲಿ ಸಂಶಯವೇ ಇಲ್ಲ.

## ಪುರುಷರೂ ಬಳಸುತ್ತಾರೆ...!

ಬುಗುಡಿ ಬರೀ ಮಹಿಳೆಯರಿಗೆ ಮಾತ್ರ ಸೀಮಿತವಾಗಿಲ್ಲ. ಮಹಾರಾಷ್ಟ್ರ ಹಾಗೂ ಗುಜರಾತಿನಲ್ಲಿ ಪುರುಷರೂ ಓಲೆ ಹಾಗೂ ಬುಗುಡಿಗಳನ್ನು ಧರಿಸುತ್ತಾರೆ. ಮಹಾರಾಷ್ಟ್ರದ ರಾಜಮನೆತನದವರು ಈ ಬುಗುಡಿಗಳಲ್ಲಿ ಮುತ್ತು, ಹವಳದ ಪದಕ ಹಾಗೂ ಹರಳುಗಳುಳ್ಳ ಬುಗುಡಿಯನ್ನು ಧರಿಸುವುದು ಪದ್ಧತಿ. ಗಂಡಸರು ಧರಿಸುವ ಈ ಬುಗುಡಿಗೆ 'ಬಾಲಿ' ಎಂದೂ ಕರೆಯುತ್ತಾರೆ. ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ನಡೆಯುವ ಮದುವೆ ಸಮಾರಂಭಗಳಲ್ಲಿ ಪುರುಷರು ಈ ತರಹದ ಮುತ್ತು, ಹವಳಗಳನ್ನು ಅಳವಡಿಸಿದ ಸಾಂಪ್ರದಾಯಿಕ ಬಾಲಿ ಧರಿಸುವುದನ್ನು ನೋಡಬಹುದು.

ಬುಗುಡಿಗಳಲ್ಲಿ ಹಲವಾರು ವಿನ್ಯಾಸಗಳಿವೆ. ಮಹಾರಾಷ್ಟ್ರದ ಬುಗುಡಿ ಎಂದರೆ ಅವುಗಳಲ್ಲಿ ಮುತ್ತುಗಳನ್ನು ಅಳವಡಿಸಲಾಗಿರುತ್ತದೆ. ಇವುಗಳಲ್ಲಿ ಸಾಂಪ್ರದಾಯಿಕ ಬುಗುಡಿಗಳು ನವಿಲಿನ ಆಕಾರ ಹೊಂದಿದ್ದು, ಅವುಗಳ ಅಲಂಕಾರಕ್ಕೆ ಮಧ್ಯೆ ಕೆಂಪು ಹರಳು ಹಾಗೂ ಸುತ್ತಲೂ ವಿವಿಧ ಗಾತ್ರದ ಬಿಳಿ ಮುತ್ತುಗಳನ್ನು ಅಲಂಕರಿಸಿರುತ್ತಾರೆ. ನೋಡಲು ಅತ್ಯಂತ ಸುಂದರವಾಗಿರುವ ಈ ತರಹದ ಬುಗುಡಿಗಳು ಮದುವೆ ಅಥವಾ ಇನ್ನಿತರ ಶುಭ ಸಮಾರಂಭಕ್ಕೆ ಧರಿಸಲು ತುಂಬಾ ಸೂಕ್ತವಾದ ಆಭರಣ. ■

## ಬದಲಾದ ಟ್ರೆಂಡ್: 'ಛೀ' ಇಂದ 'ವಾವ್'ವರೆಗೆ...!

ಒಂದು ಕಾಲದಲ್ಲಿ 'ಛೀ.. ಈ ಬುಗುಡಿ ಹಳೆ ಫ್ಯಾಷನ್, ಅದು ಅಜ್ಜಿಯ ಕಾಲದ್ದು' ಎಂದು ಮೂಗು ಮುರಿಯುತ್ತಿದ್ದ ನಾರಿಯರೇ ಇಂದು ಅದೇ ಬುಗುಡಿಯತ್ತ ಆಕರ್ಷಿತರಾಗುತ್ತಿದ್ದಾರೆ. ಫ್ಯಾಷನ್ ಜಗತ್ತು ಭೂಮಿಯಂತೆ ವೃತ್ತಾಕಾರದಲ್ಲಿ ಸುತ್ತುತ್ತದೆ, ಇಲ್ಲಿ ಯಾವುದೂ ಹಳೆಯದಲ್ಲ. ಓಲ್ಡ್ ಈಸ್ ಗೋಲ್ಡ್ ಎನ್ನುವ ಹಾಗೆ ಹಳೆಯ ಆಭರಣಗಳಿಗೆ ಹೊಸ ಟಚ್ ಕೊಟ್ಟು ಮತ್ತೆ ಮಾನಿನಿಯರ ಮನ ಗೆಲ್ಲುವಂತೆ ಮಾಡುತ್ತದೆ.

ಇಂದು ಸದೆಷ್ಟು ಹೊಳಪಿನ ಆಭರಣಗಳು ಮಾರುಕಟ್ಟೆಗೆ ಕಾಲಿಟ್ಟರೂ ಬುಗುಡಿ ಮಾತ್ರ ತನ್ನ ಕಳೆಯನ್ನು ಕಳೆದುಕೊಂಡಿಲ್ಲ. ಬದಲಾಗಿ ಇಂದು 'ವಿಂಟೇಜ್ ಕ್ಲಾಸಿಕ್ ಜ್ಯುವೆಲ್ಲರಿ' ಎನಿಸಿಕೊಂಡಿದೆ.

